# ಶ್ರೀಮಾತೆಯವರ ಸ್ಮೃತಿ

ಬಂಗಾಳಿ ಮೂಲ : **ಗೋಲಾಪ್‌ಸುಂದರೀ ದೇವಿ (ಗೋಲಾಪ್- ಮಾ)** ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

ಒಂದು ದಿನ ಅಣ್ಣ ಗೋಪಾಲ ಎಂಟಾಣೆಗೆ ಸಾಮಾನುಗಳನ್ನು ಖರೀದಿಸಿ, ಅವನ್ನೆಲ್ಲ ಗಂಟುಮೂಟೆ ಕಟ್ಟಿ ತಂದರು. ಗಂಟು ತುಂಬಾ ಬಿಗಿಯಾಗಿತ್ತು. ನಾನು ಠಾಕೂರರ ಬಳಿಗೆ ಹೋಗಿ ಹೇಳಿದೆ: ‘‘ಆ ಭಕ್ತರ ಗಂಟು ಎಷ್ಟೊಂದು ಬಿಗಿಯಾಗಿದೆ – ನನಗೆ ಬಿಡಿಸಲು ಸಾಧ್ಯವಾಗಲೇ ಇಲ್ಲ.’’ ಸಾಮಾನುಗಳನ್ನು ನೋಡಿ ಠಾಕೂರರು ಬೇಜಾರುಪಟ್ಟುಕೊಂಡು ಶ್ರೀಮಾತೆಯವರ ಬಳಿಗೆ ಹೋಗಿ, ‘‘ಇಷ್ಟೊಂದು ಸಾಮಾನುಗಳೆ?’’ ಎಂದರು. ಅದಕ್ಕೆ ಶ್ರೀಮಾತೆ, ‘‘ಎಲ್ಲರೂ ಊಟ ಮಾಡುತ್ತಾರೆ ಅಂತ ತಂದಿದ್ದಾರೆ’’ ಎಂದರು. ಶ್ರೀರಾಮಕೃಷ್ಣರು, ‘‘ಇಲ್ಲಿ (ಕಾಳೀಮಂದಿರದಲ್ಲಿ) ಒಂದು ವ್ಯವಸ್ಥೆಯಿದೆ, ಹಾಗಿದ್ದೂ ಕೂಡ, ಇಷ್ಟೊಂದು ಖರ್ಚು ಮಾಡುವುದೇಕೆ? ಅದಲ್ಲದೆ, ಎರಡು ಹೊತ್ತು ಒಲೆ ಹೊತ್ತಿಸಿ, ಅಡುಗೆ ಮಾಡಿ ನಿನ್ನ ಆರೋಗ್ಯ ಕೂಡ ಕೆಟ್ಟುಹೋದೀತು. ನೀನು ಅಷ್ಟೊಂದು ಅಡುಗೆ ಮಾಡಿ ಹಾಕಬೇಕಾಗಿಲ್ಲ. ನಾನು ಅದನ್ನೆಲ್ಲ ತಿನ್ನಲಾರೆ’’ ಎಂದರು. ಅವರು ಆ ತರಕಾರಿ ಪಲ್ಯಗಳನ್ನೆಲ್ಲ ತಿನ್ನಲೇ ಇಲ್ಲ. ಅವನ್ನೆಲ್ಲ ಕಾಳೀಮಂದಿರಕ್ಕೆ ಕೊಡಲಾಯಿತು. ಶ್ರೀಮಾತೆಯವರಿಗೆ ದುಃಖವುಂಟಾಯಿತು. ಅವರು ಅಳತೊಡಗಿದರು. ಠಾಕೂರರು ಮತ್ತೆ ಅವರಿಗೆ ತಿಳಿಯಹೇಳಿದರು: ‘‘ನಿನಗೆ ಕಷ್ಟವಾಗುತ್ತದೆ ಎಂದೇ ಹೇಳುತ್ತಿದ್ದೇನೆ, ಎರಡು ಹೊತ್ತು ಅಷ್ಟೊಂದು ಅಡುಗೆ ಮಾಡಬೇಕೇ ಅಂತ. ಈಗ ಹೇಳುತ್ತೇನೆ, ಇನ್ನು ಮೇಲೆ ಇದಾಗಲಿ, ಅದಾಗಲಿ – ಏನನ್ನಾದರೂ ಅಡುಗೆ ಮಾಡು. ಇನ್ನೇನೂ ಹೇಳಲಾರೆ. ಉದಾಸೀನ ಭಾವದಿಂದ ಇರುತ್ತೇನೆ. ಏನು ಇರುತ್ತದೋ ಅದನ್ನೇ ತಿನ್ನುತ್ತೇನೆ. ಆದರೂ ನಿನಗೆ ಯಾವಾಗ ಯಾವರೀತಿ ಅಡುಗೆ ಮಾಡಲು ಇಚ್ಛೆಯುಂಟಾಗುವುದೋ, ಹಾಗೇ ಮಾಡು. ನನ್ನನ್ನು ಕೇಳಬೇಕಾಗಿಲ್ಲ.’’

ಶ್ರೀಮಾತೆಯವರು ಚಿನ್ನಾಭರಣಗಳನ್ನು ಧರಿಸುವುದರ ಬಗ್ಗೆ ಕೇಳಿದಾಗ ಶ್ರೀರಾಮಕೃಷ್ಣರು ಹೇಳಿದ್ದರು: ‘‘ಅವಳು ಯಾರು? ಅವಳು ಅಲಂಕಾರ ಮಾಡಿಕೊಳ್ಳುವುದನ್ನು ಇಷ್ಟಪಡುತ್ತಾಳೆ. ನಾನೇ ಅವುಗಳನ್ನೆಲ್ಲ ಅವಳಿಗೆ ಮಾಡಿಸಿಕೊಟ್ಟಿದ್ದೇನೆ. ಅವಳು ಶಾರದೆ; ಸರಸ್ವತಿ. ಅಲಂಕಾರ ಮಾಡಿಕೊಳ್ಳುವುದು ಎಂದರೆ ಅವಳಿಗೆ ಇಷ್ಟ. ಆದ್ದರಿಂದಲೇ ಅವಳಿಗೆ ಆಭರಣಗಳನ್ನು ಮಾಡಿಸಿಕೊಟ್ಟೆ.’’

*


# ವಿವೇಕಪ್ರಭ



**ಶ್ರೀ ರಾಮಕೃಷ್ಣ ಆಶ್ರಮ, ಯಾದವಗಿರಿ, ಮೈಸೂರು-570 020**

## ಇಂದೇ ಚಂದಾದಾರರಾಗಿರಿ!

**ಪೋಷಕ ಸಹಾಯಧನಕ್ಕೆ 80-G ಅನ್ವಯ ತೆರಿಗೆ ವಿನಾಯಿತಿ ಇರುತ್ತದೆ. ಆಜೀವ ಚಂದಾದಾರರಿಗೆ ಮತ್ತು ಪೋಷಕರಿಗೆ ಮೈಸೂರು ಆಶ್ರಮದ ಪುಸ್ತಕಗಳ ಮೇಲೆ ಮೈಸೂರು ಆಶ್ರಮದ ಮೂಲಕ ನೇರವಾಗಿ ಖರೀದಿ ಮಾಡಿದಾಗ ಮಾತ್ರ ಶೇ. 20% ರಿಯಾಯಿತಿ ನೀಡಲಾಗುವುದು. ಚಂದಾ ವಿವರಗಳನ್ನು ಈ ಕೆಳಗಿನ ಅರ್ಜಿಯಲ್ಲಿ ಪಡೆಯಿರಿ.**

ಚಂದಾ ಹಣವನ್ನು (ಶ್ರೀರಾಮಕೃಷ್ಣ ಆಶ್ರಮ, ವಿವೇಕಪ್ರಭ A/c ಗೆ)
EMO/ D.D./ Cheque ಮೂಲಕ ಕಳುಹಿಸಬಹುದು.

*Net Banking ಮೂಲಕ ಪಾವತಿಸಲು ಬೇಕಾದ ವಿವರಗಳು:*

A/c. Name : **Sri Ramakrishna Ashrama**
SB A/c No : **520101237240455**
IFSC Code : **UBIN0902748**
Bank Name : **Union Bank of India**
Branch : **Vonitkoppal, Mysuru - 02**

**ಈ ಕೆಳಗಿನ ಯಾವುದೇ ಆಪ್‌ಗಳ ಮೂಲಕ QR Code ಅಥವಾ UPI ID 9481533505@upi ಬಳಸಿ ಪಾವತಿ ಮಾಡಬಹುದು.**

**ಸೂಚನೆ: ಯಾವುದೇ ಯು.ಪಿ.ಐ. ಆಪ್‌ಗಳ ಮೂಲಕ ಹಣ ವರ್ಗಾಯಿಸುವಾಗ ಸಂದೇಶದ ಕಾಲಂನಲ್ಲಿ ರಸೀತಿ ಸಂಖ್ಯೆಯನ್ನು ನಮೂದಿಸುವುದು ಅಗತ್ಯ .**

**For Online : www.srkmys.org/vivekaprabha**